**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1903/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಉಮೇಶ | ಪ್ರಾ.ಸಾಃ 1 |
| ತಂದೆಯ/ಗಂಡನ ಹೆಸರು | | ಲೇಟ್ ಮಹದೇವಪ್ಪ | ಚಾಸಾಃ 1 |
| ವಯಸ್ಸು | | 33 | |
| ಕೆಲಸ | | ವ್ಯವಸಾಯ | ಸಾ ಪ್ರ ಬೋ |
| ವಾಸ | | ಕಾರ್ಯ ಗ್ರಾಮ | ದಿಃ 12.06.2023 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಗಳು ನಮ್ಮ ಪಕ್ಕದ ಮನೆಯವರಾಗಿದ್ದು, ಗ್ರಾಮದವರಾಗಿರುತ್ತಾರೆ , ಚಾಸಾ 2 ನನ್ನ ಅಣ್ಣ, ಚಾಸಾ 3 ನನ್ನ ತಾಯಿ, ಚಾಸಾ 4 ರಿಂದ 10 ನಮ್ಮ ಗ್ರಾಮಸ್ಥರಾಗಿರುತ್ತಾರೆ .

2. ನಮ್ಮ ಮನೆಯ ಪಕ್ಕದಲ್ಲಿರುವ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ದಾರಿಯಿದ್ದು, ಸದರಿ ದಾರಿಯ ಮೂಲಕ ನಮ್ಮ ಮನೆಯ ದಾರಿಗೆ ಓಡಾಡುತ್ತೇವೆ. ಸದರಿ ದಾರಿಗೆ ಅಡ್ಡಲಾಗಿ ದಿನಾಂಕ 10.08.2014 ರಂದು ಸಂಜೆ 06.00 ಗಂಟೆಗೆ ಆರೋಪಿತರು ಎತ್ತಿನ ಗಾಡಿಯನ್ನು ಅಡ್ಡಲಾಗಿ ನಿಲ್ಲಿಸಿದ್ದರು. ಆಗ ನಾನು ಏಕೆ ದಾರಿಗೆ ಅಡ್ಡಲಾಗಿ ಎತ್ತಿನಗಾಡಿಯನ್ನು ನಿಲ್ಲಿಸಿದ್ದೀರಾ ಎಂದು ಕೇಳಿದಾಗ, 1 ನೇ ಆರೋಪಿ ಏನೋ ಬೋಳಿ ಮಗನೇ ನಾನೇ ನಿಲ್ಲಿಸಿದ್ದು ಎಂದು ಅವಾಚ್ಯ ಶಬ್ದಗಳಿಂದ ಬೈದು, ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದ ನನ್ನ ಹಣೆಯ ಮೇಲ್ಭಾಗಕ್ಕೆ ಹೊಡೆದಿರುತ್ತಾರೆ. ಅಲ್ಲೇ ಇದ್ದ 2 ನೇ ಆರೋಪಿ ಹಲ್ಲಿನಿಂದ ನನ್ನ ಎಡಗೆನ್ನೆಗೆ ಮತ್ತು ಮತ್ತು ಬಲ ತೊಡೆಗ ಕಚ್ಚಿರುತ್ತಾರೆ. 3 ನೇ ಆರೋಪಿ ನನ್ನ ಮೈಕೈಗೆ ಕೈಯಿಂದ ಹೊಡೆದಿರುತ್ತಾರೆ . ನಾನು ನೋವಿನಿಂದ ಕಿರುಚುತಿದ್ದಾಗ ಗಲಾಟೆ ಬಿಡಿಸಲು ಚಾಸಾ 2 ಮತ್ತು 3 ರವರು ಬಂದಿರುತ್ತಾರೆ. ಆಗ 1 ನೇ ಆರೋಪಿ ಚಾಸಾ 2 ರವರಿಗೆ ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದ ಎಡ ಮುಂಗೈಗೆ ಹೊಡೆದಿದ್ದು ಮೂಳೆ ಮುರಿದಿರುತ್ತದೆ. 2 ನೇ ಆರೋಪಿ ಹಲ್ಲಿನಿಂದ ಚಾಸಾ

3 ರವರ ಉಂಗುರದ ಬೆರಳಿಗೆ ಕಚ್ಚಿರುತ್ತಾರೆ. 4 ನೇ ಆರೋಪಿ ಚಾಸಾ 3 ರವರನ್ನು ಕೆಳಕ್ಕೆ ತಳ್ಳಿ ನೋವುಂಟು ಮಾಡಿರುತ್ತಾರೆ. ಚಾಸಾ 4 ಮತ್ತು 5 ರವರು ಬಂದು ಗಲಾಟೆ ಬಿಡಿಸಿರುತ್ತಾರೆ. ಚಾಸಾ 9 ಮತ್ತು 10 ರವರು ನಮ್ಮನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾವು ಸರ್ಕಾರಿ ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ದಿನಾಂಕ 11.08.2014 ರಂದು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ನನ್ನ ಹೇಳಿಕೆಯನ್ನು ಪಡೆದುಕೊಳ್ಳುವ ಕಾಲಕ್ಕೆ ಚಾಸಾ 11 ರವರು ಇದ್ದರು. ಸಾಕ್ಷಿ ಹೇಳಿಕೆಯ ದೂರನ್ನು ನೋಡಿ ಗುರುತಿಸಿದ್ದು, ಇದನ್ನು ನಿಪಿ 1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು, ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

( ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು )

**ಪಾಟೀ ಸವಾಲುಃ ಶ್ರೀ ಎಪಿಪಿ ಯವರಿಂದಃ**

3. 4 ನೇ ಆರೋಪಿ ಚಾಸಾ 3 ರವರನ್ನು ತಳ್ಳಿ ಬೀಳಿಸಿದಾಗ ಚಾಸಾ 3 ರವರ ಸೊಂಟಕ್ಕೆ ನೋವಾಗಿರುತ್ತದೆ ಎಂದರೆ ಸರಿ. ನಮ್ಮ ಮತ್ತು ಆರೋಪಿತರ ನಡುವೆ ತಿರುಗಾಡುವ ಗಲ್ಲಿಯ ವಿಚಾರವಾಗಿ ಆಗಾಗ ಗಲಾಟೆಯಾಗುತ್ತಿತ್ತು ಎಂದರೆ ಸರಿ. ಆ ಬಗ್ಗೆ ಬಗೆಹರಿಸಿಕೊಡುವಂತೆ ದುಗ್ಗಳ್ಳಿ ಗ್ರಾಮ ಪಂಚಾಯಿತಿಯವರಿಗೆ ದೂರನ್ನು ನೀಡಿದ್ದೆವು ಎಂದರೆ ಸರಿ.

**ಪಾಟೀ ಸವಾಲು ಶ್ರೀ ಎಂ.ಬಿ. ವಕೀಲರಿಂದ ಆರೋಪಿ ಪರವಾಗಿಃ**

4. ನಮ್ಮ ಮನೆಯ ಪಶ್ಚಿಮಕ್ಕೆ ಮಲ್ಲಣ್ಣರವರ ಮನೆ ಇದೆ ಎಂದರೆ ಸರಿ. ಮಲ್ಲಣ್ಣರವರ ಮನೆಯ ಪೂರ್ವ ಭಾಗಕ್ಕೆ ತಿರುಗಾಡುವ ಜಾಗ ಇದೆ ಎಂದರೆ ಸರಿ. ಸದರಿ ಜಾಗ 03 ಅಡಿ ಅಗಲ ಇದೆ ಎಂದರೆ ಸರಿ.

ಮಲ್ಲಣ್ಣರವರ ಮನೆಯಿಂದ ದಕ್ಷಿಣ ದಿಕ್ಕಿನಲ್ಲಿರುವ ಮುಖ್ಯ ರಸ್ತೆಗೆ ಬರಬೇಕು ಎಂದರೆ ಸರಿ. ಮಲ್ಲಣ್ಣರವರ ಮನೆಯ ದಕ್ಷಿಣಕ್ಕೆ ವೀರಭದ್ರೇಶ್ವರ ದೇವಸ್ಥಾನ ಇದೆ ಎಂದರೆ ಸರಿ. ನಮ್ಮ ಮನೆಯ ದಕ್ಷಿಣಕ್ಕೆ ಹೊಂದಿಕೊಂಡಂತೆ ಆರೋಪಿತರಿಗೆ ಸೇರಿರುವ ಶೆಡ್ಡನ್ನು ನಿರ್ಮಿತಿ ಮಾಡಿಕೊಂಡಿರುವ ಜಾಗ ಇದೆ ಎಂದರೆ ಸರಿ. ನಾವು ಇದ್ದಂತಹ ಮನೆಯನ್ನು ಈಗ್ಗೆ 02 ವರ್ಷಗಳ ಹಿಂದೆ ಕೊಟ್ಟಿಗೆಯನ್ನಾಗಿ ಮಾಡಿಕೊಂಡಿದ್ದೇವೆ. ನಾವು ಹೊಸ ಮನೆಗೆ ಹೋಗಿ 04 ವರ್ಷಗಳಾಗಿವೆ. ಗಲಾಟೆಯಾದ ಸಮಯದಲ್ಲಿ ನಾವು ಹೊಸಮನೆಯಲ್ಲಿದ್ದೆವು ಎಂದರೆ ಸರಿಯಲ್ಲ. ನಾವು ದೂರು ನೀಡಿರುವ ವಿವಾದಿತ ಘಟನೆಯ ದಿನದಂದು ಮೊದಲು ಮಲ್ಲಣ್ಣ ಮತ್ತು ಆರೋಪಿತರ ನಡುವೆ ಗಲಾಟೆ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ತಿರುಗಾಡುವ ಜಾಗದ ಕುರಿತಾಗಿ ನಾವು ಯಾವುದೇ ಸಿವಿಲ್ ಪ್ರಕರಣವನ್ನು ದಾಖಲಿಸಿಲ್ಲ. ಮಲ್ಲಣ್ಣರವರು ತಿರುಗಾಡುವ ಜಾಗದ ಕುರಿತು ಸಿವಿಲ್ ಪ್ರಕರಣ ದಾಖಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ತಿರುಗಾಡುವ ಜಾಗದ ಕುರಿತು 02 ಬಾರಿ ಪಂಚಾಯಿತಿಯನ್ನು ಸೇರಿಸಿದ್ದೆವು. ನಮ್ಮ ಗ್ರಾಮದ ಮುಖಂಡರು ಪಂಚಾಯಿತಿಯಲ್ಲಿ ಸೇರಿದ್ದರು, ಅವರ ಹೆಸರು ಗುರುಸಿದ್ದಪ್ಪ, ಗುರುಸ್ವಾಮಿ, ನಿಂಗಣ್ಣ, ಸಿದ್ದಪ್ಪಣ್ಣ ಹಾಗೂ ಇತರರು ಇದ್ದರು. ನಾವು ದುಗ್ಗಹಳ್ಳಿ ಗ್ರಾಮ ಪಂಚಾಯಿತಿಗೆ ನೀಡಿದ್ದ ದೂರಿನ ಪ್ರತಿಯನ್ನು ತನಿಖಾಧಿಕಾರಿಗೆ ನೀಡಿಲ್ಲ. ನಮ್ಮ ಮತ್ತು ಮಲ್ಲಣ್ಣರವರ ಮನೆಯ ನಡುವೆ ಇದ್ದ 03 ಅಡಿಗಳ ಜಾಗದಲ್ಲಿ ತಿರುಗಾಡಲು ನಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಆರೋಪಿತರು ಟೈರ್ ಗಾಡಿಯನ್ನು ನಿಲ್ಲಿಸಿದ್ದರು. ಆರೋಪಿತರಿಗೆ ಟೈರ್ ಗಾಡಿ ಅಥವಾ ಮರದ ಗಾಡಿ ಇಲ್ಲ ಎಂದರೆ ಸರಿಯಲ್ಲ. ನಾವು ಮಲ್ಲಣ್ಣರವರ ಮಾತನ್ನು ಕೇಳಿಕೊಂಡು ಸುಳ್ಳು ದೂರನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ಮಲ್ಲಣ್ಣ ಹಾಗೂ ಆರೋಪಿತರ ನಡುವೆ ನಡೆಯುತ್ತಿದ್ದ ಗಲಾಟೆಯ ಕಾಲಕ್ಕೆ ನಾವು ಹೋಗಿದ್ದು, ಹಾಗಾಗಿ ಮಲ್ಲಣ್ಣರವರ ಚಿತಾವಣೆಯ ಮೇರೆಗೆ ಸುಳ್ಳು ದೂರನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. 3 ನೇ ಆರೋಪಿ ಹೆಗ್ಗಡೆಹಳ್ಳಿ ಗ್ರಾಮದವರು. ಗಲಾಟೆಯ ಕಾಲಕ್ಕೆ ಚಾಸಾ 4 ಮತ್ತು 5 ರವರನ್ನು ಹೊರತುಪಡಿಸಿ ಇತರೆ ಯಾರಿದ್ದರು ಎಂದು ಗೊತ್ತಿಲ್ಲ. ಗಲಾಟೆ ನಡೆದ ಜಾಗ ನಮ್ಮ ಮನೆಯ ಮುಂಭಾಗ ಇದ್ದು, ಊರಿನ ಮಧ್ಯ ಭಾಗದಲ್ಲಿ ಇದೆ. ಗಲಾಟೆ ನಡೆದ ಕಾಲಕ್ಕೆ ನಾವು ಸ್ಥಳದಲ್ಲಿ

ಇರಲಿಲ್ಲ, ಬದಲಾಗಿ ಸದರಿ ಸ್ಥಳದಿಂದ 500 ಮೀ. ಅಂತರದಲ್ಲಿರುವ ಹೊಸ ಮನೆಯಲ್ಲಿದ್ದೆವು ಎಂದರೆ ಸರಿಯಲ್ಲ. ನಾನೇ ಬಿದ್ದು ಗಾಯ ಮಾಡಿಕೊಂಡು ಮಲ್ಲಣ್ಣರವರ ಚಿತಾವಣೆಯ ಮೇರೆಗೆ ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಕೊಟ್ಟಿಗೆಯಲ್ಲಿ ದನ ಕಟ್ಟಲು ಹೋಗಿ ಗಾಯ ಮಾಡಿಕೊಂಡು ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 2 ಈಗ ಮದ್ದೂರಿನಲ್ಲಿ ಕೆಲಸ ಮಾಡುತ್ತಿದ್ದರು. ಈ ಮೊದಲು ಮೈಸೂರಿನ ಐ.ಬಿ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದಾಗ ವಾರಕ್ಕೊಮ್ಮೆ ನಮ್ಮ ಊರಿಗೆ ಬರುತ್ತಿದ್ದರು. ಒಮ್ಮೆ ಚಾಸಾ 2 ರವರಿಗೆ ಸ್ಕೂಟರಿನಲ್ಲಿ ಬಿದ್ದು ಅಪಘಾತ ಆಗಿತ್ತು ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಪೊಲೀಸರು ಪಡೆದುಕೊಂಡಿದ್ದು, ಸದರಿ ಕಾಲಕ್ಕೆ ವೈದ್ಯರಾದ ಪುಟ್ಟತಾಯಮ್ಮರವರು ಇದ್ದರು. ನನ್ನ ಹೇಳಿಕೆಯನ್ನು 12.00 ಗಂಟೆಯಿಂದ 01.00 ರವರೆಗೆ ಪಡೆದಿರುತ್ತಾರೆ. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ದೊಣ್ಣೆಯಿಂದ ಹಲ್ಲೆ ಮಾಡಿಲ್ಲ ಮತ್ತು ಹಲ್ಲಿನಿಂದ ಕಚ್ಚಿಲ್ಲ ಎಂದರೆ ಸರಿಯಲ್ಲ. 4 ನೇ ಆರೋಪಿ ಚಾಸಾ 3 ರವರನ್ನು ತಳ್ಳಿ ಬೀಳಿಸಿಲ್ಲ ಹಾಗೂ ಆರೋಪಿತರು ನಮಗೆ ಕೈಯಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ರ ದೊಣ್ಣೆಗಳು ಸಾಮಾನ್ಯವಾಗಿ ನಮ್ಮ ಊರಿನಲ್ಲಿ ಸಿಗುತ್ತದೆ ಎಂದರೆ ಸರಿ. ಮುದ್ದೆ ಮಾಲು 1 ರ ದೊಣ್ಣೆಯಿಂದ ಆರೋಪಿತರು ನಮಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ನ್ನು ನಾವೇ ಸೃಷ್ಟಿಸಿಕೊಂಡು ಪೊಲೀಸರಿಗೆ ನೀಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಇದೇ ಘಟನೆಗೆ ಸಂಬಂಧಿಸಿದಂತೆ ನಮ್ಮ ವಿರುದ್ದ ಒಂದು ದೂರನ್ನು ನೀಡಿದ್ದರು ಎಂದರೆ ಸರಿ. ಮಲ್ಲಣ್ಣರವರಿಗೆ ದಾರಿ ಬಿಡಿಸಿಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**